# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ವಾರ್ಡ್ -144ರ ವಾರ್ಡ್ ಸಭೆಯ ನಡವಳಿ

ಚಿಕ್ಕಪೇಟೆ ವಿಧಾನಸಭಾ ಕ್ಷೇತ್ರದ ಸಿದ್ದಾಪುರ ವಾರ್ಡ್-144 ರಲ್ಲಿ ವಾರ್ಡ್ ಸಭೆಯನ್ನು ಮಾನ್ಯ ಶ್ರೀ. ಪ್ರದೀಪ್‌ಕುಮಾರ್ ಎನ್., ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು, ಕೆಂಪೇಗೌಡನಗರ ಉಪವಿಭಾಗ ಹಾಗೂ ನೋಡಲ್ ಅಧಿಕಾರಿ ಮತ್ತು ವಾರ್ಡ್ ಸಮಿತಿ ಅಧ್ಯಕ್ಷರ ಅಪ್ಪಣೆ ಮೇರೆಗೆ ದಿನಾಂಕ:06/08/2022 ರಂದು ಶನಿವಾರದಂದು ಬೆಳಗ್ಗೆ 10.00 ಗಂಟೆಗೆ ವಾರ್ಡ್ ಕಮಿಟಿ ಸಭೆಯನ್ನು ಟಿ. ಮರಿಯಪ್ಪ ರಸ್ತೆಯಲ್ಲಿರುವ ವಾರ್ಡ್ ಕಛೇರಿ ಸಭಾಂಗಣದಲ್ಲಿ ಕರೆಯಲಾಗಿದ್ದು, ವಾರ್ಡ್ ಕುಂದು ಕೊರತೆಗಳ ಬಗ್ಗೆ ಚರ್ಚಿಸಲು ಅಧಿಕಾರಿಗಳಿಗೆ ಹಾಗೂ ಸಾರ್ವಜನಿಕರಿಗೆ ಆಹ್ವಾನ ನೀಡಿದ್ದು, ಸಭೆಯನ್ನು ನಡೆಸಲಾಯಿತು.

**ಹಾಜರಿದ್ದವರು:-**

1. ಶ್ರೀ. ಪ್ರದೀಪ್‌ಕುಮಾರ್ ಎನ್, ಸ.ಕಾ.ನಿ.ಅ (ಕೆ.ಗೌ.ನ) ಹಾಗೂ ನೋಡಲ್ ಅಧಿಕಾರಿ.
2. ಶ್ರೀ. ಆರ್. ಕೊಟ್ರೇಶ್ ನಾಯಕ್, ಸಹಾಯಕ ಅಭಿಯಂತರರು, ವಾರ್ಡ್-144.
3. ಶ್ರೀ. ರಂಗಸ್ವಾಮಿ ಕೆ.ಎಲ್. ಸ.ಕಾ.ನಿ.ಅ (ಘನತ್ಯಾಜ್ಯ ನಿರ್ವಹಣೆ)
4. ಶ್ರೀ. ರವೀಂದ್ರ ಹಿಜೇರಿ, ಹಿರಿಯ ಆರೋಗ್ಯ ಪರಿವೀಕ್ಷಕರು.
5. ಶ್ರೀಮತಿ. ಸುರೇಖ ಆರ್. ಕಿರಿಯ ಆರೋಗ್ಯ ಪರಿವೀಕ್ಷಕರು ವಾರ್ಡ್-144.
6. ಶ್ರೀಮತಿ. ಶ್ರೀಜಾ, ಸಹಾಯಕ ಅಭಿಯಂತರರು, ಬೆಂ.ನೀ.ಸ. & ಒ. ಮಂಡಳಿ.
7. ಹಾಗೂ ಸಾರ್ವಜನಿಕರು.

*********

1. ನೋಡಲ್ ಅಧಿಕಾರಿಯವರು ಮಾತನಾಡಿ ಕಳೆದ ಸಭೆಯಲ್ಲಿ ಚರ್ಚಿಸಿದ ವಿಷಯಗಳ ಬಗ್ಗೆ ಕೈಗೊಂಡ ಕ್ರಮಗಳ ಕುರಿತು ಕಳೆದ ಸಭೆಯ ನಡವಳಿಗಳನ್ನು ಓದುವಂತೆ ವಾರ್ಡ್ ಅಭಿಯಂತರರಿಗೆ ತಿಳಿಸಿದರು. ಅದರಂತೆ ವಾರ್ಡ್ ಅಭಿಯಂತರರು ಕಳೆದ ಸಭೆಯಲ್ಲಿ ಚರ್ಚಿಸಿದ ವಿಷಯಗಳ ಕುರಿತು ಸಭೆಯಲ್ಲಿ ಪ್ರಸ್ತಾಪಿಸಿ ದೂರುಗಳಿಗೆ ಸಂಬಂಧಿಸಿದಂತೆ ಕೈಗೊಂಡ ಕ್ರಮಗಳ ಬಗ್ಗೆ ಸಭೆಯಲ್ಲಿ ವಿವರಿಸಿದರು. ಅದರಂತೆ ಕಳೆದ ಸಭೆಯ ನಡವಳಿಗಳ ದೂರುಗಳನ್ನು ಪರಿಹರಿಸಲಾಗಿರುತ್ತದೆ.

AO 6/8/22



Scanned with CamScanner

2. ವಾರ್ಡಿನ ಸ್ಥಳೀಯರಾದ ಶ್ರೀ. ಮಂಜುನಾಥ್ ಟಿ. ರವರು ಮಾತನಾಡಿ ವಾರ್ಡ್ ಪ್ರದೇಶದ ರಸ್ತೆಗಳಲ್ಲಿ ಬಿಡಾಡಿ ಹಸುಗಳು ಹೆಚ್ಚಾಗಿದ್ದು, ಸಾರ್ವಜನಿಕರು ಮತ್ತು ವಾಹನಗಳು ಓಡಾಡಲು ತೊಂದರೆಯಾಗಿರುವುದಾಗಿ ತಿಳಿಸುತ್ತಾ, ಬೇರೆ ಪ್ರದೇಶದಿಂದ ನಾಯಿಗಳನ್ನು ತಂದು ಇಲ್ಲಿ ಬಿಡುತ್ತಿದ್ದಾರೆ ಎಂದು ದೂರಿದರು. ಇದರನ್ವಯ ನೋಡಲ್ ಅಧಿಕಾರಿಯವರು ಮಾತನಾಡಿ ಪಶು ಸಂಗೋಪನಾ ಇಲಾಖೆಯವರ ಗಮನಕ್ಕೆ ತಂದು ಕ್ರಮ ವಹಿಸಲು ವಾರ್ಡ್ ಅಭಿಯಂತರರಿಗೆ ತಿಳಿಸಿದರು.

3. ವಾರ್ಡಿನ ಸ್ಥಳೀಯರಾದ ಶ್ರೀ. ಅಜ್ಮಲ್ ರವರು ಮಾತನಾಡಿ ವಾರ್ಡ್ ಪ್ರದೇಶದ 3ನೇ ಅಡ್ಡರಸ್ತೆ, ಸೋಮೇಶ್ವರನಗರದ ಅತೀಕ್ ಮಸೀದಿ ಹತ್ತಿರ, ವಾಂಬೆ ಕ್ವಾಟ್ರಸ್‌ನ SWD ಹತ್ತಿರ ಕಸವನ್ನು ಸರಿಯಾಗಿ ವಿಲೇವಾರಿ ಮಾಡುತ್ತಿಲ್ಲವೆಂದು ದೂರಿದರು. ವಾರ್ಡ್ ಕಮಿಟಿ ಸಭೆಯಲ್ಲಿ ಹಾಜರಿದ್ದ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು, ಘನತ್ಯಾಜ್ಯ ನಿರ್ವಹಣೆ ರವರು ಮಾತನಾಡಿ ಈ ಬಗ್ಗೆ ಕೂಡಲೇ ಕ್ರಮ ವಹಿಸುವುದಾಗಿ ಸಭೆಗೆ ತಿಳಿಸಿದರು. ಹಾಗೂ ಅಧ್ಯಕ್ಷರು ಮಾತನಾಡಿ ವಾಂಬೆ ಕ್ವಾಟ್ರಸ್‌ನ SWD ಹತ್ತಿರ ಯಾವುದಾದರೂ ಡೆಬ್ರಿಸ್ ಇದ್ದಲ್ಲಿ ತೆರವುಗೊಳಿಸಲು ವಾರ್ಡಿನ ಸಹಾಯಕ ಅಬಿಯಂತರರಿಗೆ ಸೂಚಿಸಿದರು.

4. ವಾರ್ಡಿನ ಸ್ಥಳೀಯರಾದ ಶ್ರೀ. ಅಜ್ಮಲ್ ರವರು ಮಾತನಾಡಿ ವಾರ್ಡ್ ಪ್ರದೇಶದಲ್ಲಿ ಸರಿಯಾದ ಸಮಯಕ್ಕೆ ವಿದ್ಯುತ್‌ಚ್ಛಕ್ತಿ ಸರಬರಾಜು ಮತ್ತು ಸದರಿ ವಾರ್ಡಿನ ರಸ್ತೆಗಳಾದ ಸೋಮೇಶ್ವರನಗರ, ಕೆ.ಎಂ. ಕಾಲೋನಿಗಳಲ್ಲಿ ಸುಮಾರು 10 ವಿದ್ಯುತ್ ಕಂಬಗಳು ಹಾಳಾಗಿದ್ದು, ಬದಲಿಸಿಕೊಡುವಂತೆ ಸಾಕಷ್ಟು ಬಾರಿ ಕೋರಿದ್ದರೂ ಸಹ ಈ ತಹಲ್‌ವರೆವಿಗೂ ಯಾವುದೇ ಕ್ರಮ ಕೈಗೊಂಡಿರುವುದಿಲ್ಲವೆಂದು ದೂರಿದರು. ಈ ಹಿನ್ನೆಲೆಯಲ್ಲಿ ನೋಡಲ್ ಅಧಿಕಾರಿಯವರು ಮಾತನಾಡಿ ಬೆಸ್ಕಾಂ ಇಲಾಖೆಯವರು ಗೈರುಹಾಜರಾಗಿರುವುದರಿಂದ ಈ ವಿಷಯದ ಬಗ್ಗೆ ಸೂಕ್ತ ಕ್ರಮ ವಹಿಸಲು ಸಂಬಂಧಪಟ್ಟ ಇಲಾಖೆಯವರಿಗೆ ನಿರ್ದೇಶನ ನೀಡಲಾಗುವುದೆಂದು ಸಭೆಯಲ್ಲಿ ತಿಳಿಸಿದರು.

5. ವಾರ್ಡಿನ ಸ್ಥಳೀಯರಾದ ಶ್ರೀ. ಅಜ್ಮಲ್ ರವರು ಮಾತನಾಡಿ ವಾರ್ಡ್ ಪ್ರದೇಶದಲ್ಲಿ ಸುಮಾರು 08 ರಿಂದ 10 ದಿನಗಳಿಂದ ನೀರು ಸರಬರಾಜು ಪೂರೈಕೆ ಆಗುತ್ತಿಲ್ಲ. ಇದರಿಂದ ಸ್ಥಳೀಯ ಸಾರ್ವಜನಿಕರಿಗೆ ತುಂಬಾ ತೊಂದರೆಯಾಗಿದೆ ಎಂದು ಹಾಗೂ ಸದರಿ ವಿಷಯದ ಬಗ್ಗೆ ಸಂಬಂಧಪಟ್ಟ ಇಲಾಖೆಯವರಿಗೆ ಸಾಕಷ್ಟು ಬಾರಿ ಕೋರಿದ್ದರೂ ಸಹ ನೀರಿನ ಸಮಸ್ಯೆ ಬಗ್ಗೆ ಯಾವುದೇ ಕ್ರಮ ವಹಿಸಿರುವುದಿಲ್ಲವೆಂದು ದೂರಿದರು. ಸಭೆಯಲ್ಲಿ ಹಾಜರಿದ್ದ ಬೆಂಗಳೂರು ನೀರು ಸರಬರಾಜು ಹಾಗೂ ಒಳಚರಂಡಿ ಮಂಡಳಿ ಇಲಾಖೆಯ ಸಹಾಯಕ ಅಭಿಯಂತರರು ಮಾತನಾಡಿ ಈ ವಿಷಯದ ಬಗ್ಗೆ ಪರಿಶೀಲಿಸಿ ಕೂಡಲೇ ಕ್ರಮ ವಹಿಸುವುದಾಗಿ ಸಭೆಗೆ ತಿಳಿಸಿದರು.

AE 6/8/22



Scanned with CamScanner

6. ವಾರ್ಡಿನ ಸ್ಥಳೀಯರಾದ ಶ್ರೀ. ಸುಮಂತ್, ಶ್ರೀ. ಅಜ್ಮಲ್, ಶ್ರೀ. ಸುರೇಶ್, ಹಾಗೂ ಶ್ರೀ.ಅಶೋಕ್ ರವರು ಮಾತನಾಡಿ ಮುರಳಿ ಕಾಲೋನಿಯಲ್ಲಿ ನಿರ್ಮಿಸಿದ ಆರ್.ಸಿ.ಸಿ ಚರಂಡಿಯ ಕಾಮಗಾರಿಯು ಅಪೂರ್ಣವಾಗಿರುವುದರಿಂದ ಹಾಗೂ ಸದರಿ ರಸ್ತೆಯು ಹಾಳಾಗಿರುವುದರಿಂದ ಸ್ಥಳೀಯರ ವಾಹನ ಸಂಚಾರಕ್ಕೆ ತೀವ್ರ ತರಹದ ತೊಂದರೆಯಾಗಿದೆ ಎಂದು ದೂರಿದರು. ಹಾಗೂ ಈ ಕಾಮಗಾರಿಯ ಗುತ್ತಿಗೆದಾರರಿಗೆ ಎಷ್ಟು ಬಾರಿ ಹೇಳಿದರೂ ಕಾಮಗಾರಿ ಪೂರ್ಣಗೊಳಿಸಿರುವುದಿಲ್ಲವೆಂದು ಮತ್ತೊಮ್ಮೆ ಸಭೆಯಲ್ಲಿ ಅಧ್ಯಕ್ಷರಿಗೆ ದೂರಿದರು. ಈ ವಿಷಯದ ಬಗ್ಗೆ ಅಧ್ಯಕ್ಷರು ಸಭೆಯಲ್ಲಿಯೇ ಗುತ್ತಿಗೆದಾರರಿಗೆ ಕರೆ ಮಾಡಿ ಮಾತನಾಡಿ ಕಾಮಗಾರಿಯನ್ನು ಕೂಡಲೇ ಪೂರ್ಣಗೊಳಿಸಲು ಸೂಚಿಸಿದರು. ತಪ್ಪಿದ್ದಲ್ಲಿ ಮುಂದಿನ ಕ್ರಮ ವಹಿಸುವುದಾಗಿ ಗುತ್ತಿಗೆದಾರರಿಗೆ ಸೂಚನೆ ನೀಡಿದರರು.

7. ವಾರ್ಡಿನ ಸ್ಥಳೀಯರಾದ ಶ್ರೀ. ಅಶೋಕ್ ಜಿ. ರವರು ಮಾತನಾಡಿ ಪಳೇಕಮ್ಮ ದೇವಸ್ಥಾನದ ಹತ್ತಿರವಿರುವ ಖಾಲಿ ಜಾಗದ ವಿವರಗಳನ್ನು ನೀಡಲು ಮತ್ತೊಮ್ಮೆ ಕೇಳಿದರು. ಇದರನ್ವಯ ನೋಡಲ್ ಅಧಿಕಾರಿಯವರು ಮಾತನಾಡಿ ಸಂಬಂಧಪಟ್ಟ ಕಂದಾಯ ಇಲಾಖೆಯವರು ಸಭೆಯಲ್ಲಿ ಗೈರುಹಾಜರಾಗಿರುವುದರಿಂದ ದೂರವಾಣಿ ಮುಖಾಂತರ ಸಹಾಯಕ ಕಂದಾಯ ಅಧಿಕಾರಿಗಳೊಡನೆ ಮಾತನಾಡಿ ಪಳೇಕಮ್ಮ ದೇವಸ್ಥಾನದ ಹತ್ತಿರವಿರುವ ಖಾಲಿ ಜಾಗದ ವಿವರಗಳನ್ನು ನೀಡಲು ಕೋರಿದರು.

8. ವಾರ್ಡಿನ ಸ್ಥಳೀಯರಾದ ಶ್ರೀ. ಸುರೇಶ್ ರವರು ಮಾತನಾಡಿ ಘನತ್ಯಾಜ್ಯ ಇಲಾಖೆಯ ಮಾರ್ಷಲ್ ರವರು ಸಣ್ಣ ವ್ಯಾಪಾರದ ಅಂಗಡಿಗಳಿಗೆ ಪ್ಲಾಸ್ಟಿಕ್ ಬ್ಯಾನ್ ಮಾಡಿ ದಂಡ ವಿಧಿಸುತ್ತಿರುವುದು ಕಂಡು ಬಂದಿದ್ದು, ಇದೇ ರೀತಿ ದೊಡ್ಡ ದೊಡ್ಡ ವ್ಯಾಪಾರ ಮಳಿಗೆಗಳಿಗೂ ಸಹ ಪ್ಲಾಸ್ಟಿಕ್ ಬ್ಯಾನ್ ಮಾಡಿ ದಂಡು ವಿಧಿಸಲು ಕೋರಿದರು. ಇದರನ್ವಯ ನೋಡಲ್ ಅಧಿಕಾರಿಯವರು ಮಾತನಾಡಿ ಸಭೆಯಲ್ಲಿ ಹಾಜರಿದ್ದ, ಹಿರಿಯ ಆರೋಗ್ಯ ಪರಿವೀಕ್ಷರಿಗೆ ಈ ಬಗ್ಗೆ ಕೂಡಲೇ ಕ್ರಮ ವಹಿಸಲು ಸೂಚಿಸಿದರು.

ಮೇಲಿನ ಈ ಎಲ್ಲಾ ಚಟುವಟಿಕೆಗಳನ್ನು ಕ್ರಮಬದ್ಧವಾಗಿ ನಿರ್ವಹಿಸಲು ಎಲ್ಲಾ ಸಿಬ್ಬಂಧಿ ವರ್ಗದವರು ಒಂದುಗೂಡಿ ಈ ಕಾರ್ಯದಲ್ಲಿ ಪಾಲ್ಗೊಂಡು ಮಾನ್ಯ ಆಯುಕ್ತರು (ಬಿಬಿಎಂಪಿ) ರವರು ವಹಿಸಿರುವ ಜವಾಬ್ದಾರಿಯನ್ನು ಯಶಸ್ವಿಯಾಗಿ ನಿರ್ವಹಿಸಲು ಎಲ್ಲರೂ ಸಹಕರಿಸಬೇಕೆಂದು ಹೇಳುತ್ತಾ ಸಭೆ ಮುಕ್ತಾಯಗೊಳಿಸಿದರು.

AE 6/8/22

ಕಾರ್ಯದರ್ಶಿ & ಸಹಾಯಕ ಅಭಿಯಂತರರು
ವಾರ್ಡ್ ಸಂಖ್ಯೆ – 144
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಅಧ್ಯಕ್ಷರು & ನೋಡಲ್ ಅಧಿಕಾರಿ
ವಾರ್ಡ್ ಸಂಖ್ಯೆ – 144
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ



Scanned with CamScanner